ಕೆಳಕಂಡಂತಿದೆ. (ಫೆಬ್ರವರಿ 2000ದ ಅಂತ್ಯದವರೆಗೆ)

ವರ್ಷ	ಬಿಡುಗಡೆ ಮಾಡಿದ ಹಣದ ಮೊತ್ತ
1993-94	ರೂ. 86.99 ಲಕ್ಷ
1994-95	ರೂ. 134.00 ಲಕ್ಷ
1995-96	ರೂ. 462.65 ಲಕ್ಷ
1996-97	ರೂ. 133.55 ಲಕ್ಷ
1997-98	ರೂ. 448.37 ಲಕ್ಷ
1998-99	ರೂ. 1351.90 ಲಕ್ಷ
1999-2000	ರೂ. 572.66 ಲಕ್ಷ
ಒಟ್ಟು	ರೂ. 3190. 12 ಲಕ್ಷ

ಈ. ಈ ಯೋಜನೆಯನ್ನು ಜೂನ್ 2002ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ.

149 (306)

ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಅಭಾವ ಹಾಗೂ ವೋಲ್ಟೇಜ್ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತಾಲ್ಲೂಕಿನಲ್ಲಿ ಹಾಲಿ ಇರುವ ಬೆಟ್ಟದಪುರದ ಉಪಕೇಂದ್ರಕ್ಕೆ ಓ.ಎಲ್.ಟಿ.ಸಿ ಅತ್ಯಾವಶ್ಯಕವಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಪಿರಿಯಾಪಟ್ಟಣ ಉಪಕೇಂದ್ರ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆಯೇ?

ಈ) ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಈ ಕಾಮಗಾರಿಯು ಪೂರ್ಣಗೊಳ್ಳಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು ಬಂದಿದೆ.

ಆ) ಹಾಲಿ ಇರುವ ಬೆಟ್ಟವಪುರದ ಉಪಕೇಂದ್ರದಲ್ಲಿನ ಟ್ರಾನ್ಸ್‌ಫಾರ್ಮರನ ಓ.ಎಲ್.ಟಿ.ಸಿ.ಯು ಕೆಟ್ಟಿದ್ದು ಇದರ ದುರಸ್ತಿಯಾಗಬೇಕಾಗಿದೆ. ಈ ತೊಂದರೆಯನ್ನು ಆದಷ್ಟು ಜಾಗ್ರತೆ ಸರಿಪಡಿಸಲಾಗುವುದು. ಅಲ್ಲದೆ, ಹಾಲಿ ಇರುವ ಟ್ರಾನ್ಸ್‌ಫಾರ್ಮರನ್ನು 8 ಎಂವಿ.ಎ., ಓ.ಎಲ್.ಟಿ.ಸಿ.ಟ್ರಾನ್ಸ್‌ಫಾರ್ಮರ್‌ನಿಂದ ಹಾಗೂ ಹೊಸ ಸ್ವಿಚ್ ಗೇರ್‌ಗಳಿಂದ ಬದಲಾಯಿಸುವುದರ ಬಗ್ಗೆಯೂ ಪರಿಶೀಲಿಸಲು ಸಂಬಂಧಪಟ್ಟ ನಿಗಮದ ಅಧಿಕಾರಿಗಳಿಗೆ ಆದೇಶವನ್ನು ನೀಡಲಾಗಿದೆ.

ಇ) ಹೌದು

ಈ) 'ಟರ್ನ ಕೀ' ಆಧಾರದ ಮೇಲೆ ಗುತ್ತಿಗೆದಾರರನ್ನು ನೇಮಿಸಲು ಆದೇಶ ನೀಡಲಾಗಿದ್ದು ಸದರೀ ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಸೆಪ್ಟೆಂಬರ್ 2000ರಲ್ಲಿ ಪ್ರಾರಂಭಿಸಿ ಸುಮಾರು 8 ರಿಂದ 9 ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ.

ಪಿರಿಯಾಪಟ್ಟಣ ಕ್ಷೇತ್ರಕ್ಕೆ ವಿದ್ಯುತ್ ಸಬ್ ಸ್ಟೇಷನ್

150 (294)

ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ಕ್ಷೇತ್ರಕ್ಕೆ ಒಂದು ಸಬ್‌ಸ್ಟೇಶನ್ (66 ಕೆ.ವಿ) ಮಂಜೂರು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗಿದೆ?

ಇ) ಇದು ಪೂರ್ಣಗೊಳ್ಳಲು ಇದುವರೆಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು?